ಓ. ಎಸ್. ನಂಃ 68/2016

ಪಿ. ಡಬ್ಲ್ಯೂಃ 1

ದಿಃ 28-09 -2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

<u>ಮುಂದುವರೆದ ಪಾಟೀ ಸವಾಲುಃ ಶ್ರೀ ಎ ಎ ಜಿ ಪ್ರತಿವಾದಿ ಪರ ವಕೀಲರಿಂದ ಃ</u>

11. ದಾವಾ ಆಸ್ತಿಯ ಅಳತೆಯನ್ನು ಸರ್ವೆಯರ ಅವರು ಮಾಡಿರುತ್ತಾರೆ ಎಂದು ನೀವು ಹೇಳಿದ್ದು ಅದರ ಪಿಟಿ ಶೀಟ ಯಾವ ಈಸವಿಯದ್ದು ಇರುತ್ತದೆ ಎಂದರೆ ಸಾಕ್ಷಿಯು 2008 ರ ಈಸವಿಯದ್ದು ಇರುತ್ತದೆ ಎಂದು ನುಡಿಯುತ್ತಾರೆ. 2008 ರಿಂದ 2016 ರವರೆಗೆ ದಾವೆ ಮಾಡಲು ಎನು ತೊಂದರೆ ಇತ್ತು ಎಂದರೆ ಸಾಕ್ಷಿಯು ಅವರು ಡಿಡಿಎಲ ಆರ ಗೆ ಮೇಲ್ಮನವಿಯನ್ನು ಸಲ್ಲಿಸಿದರು ನಂತರ ಡಿಸಿ ಅವರಿಗೆ ಮೇಲ್ಮನವಿಯನ್ನು ಸಲ್ಲಿಸಿದರು ಅದಕ್ಕೆ ತಡವಾಯಿತು ಎಂದು ನುಡಿಯುತ್ತಾರೆ . ನಾನು ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಸದರಿ ಕಾರಣದಿಂದ ಈ ದಾವೆ ಹಾಕಲು ತಡವಾಯಿತು ಎಂದು ಹೇಳಿ ಬರೆದಿರುವುದಿಲ್ಲ.

12. ಈಗ ಸಾಕ್ಷಿಗೆ ಅವರ ಪ್ರಮಾಣ ಪತ್ರವನ್ನು ತೋರಿಸಿ ಪ್ಯಾರಾ ನಂಬರ 9 ರಲ್ಲಿ "ನಂತರ ನನಗೆ ಹಣಕಾಸಿನ ತೊಂದರೆ ಉಂಟಾಗಿದ್ದರಿಂದ ಸದರಿ ಪ್ರಕರಣವನ್ನು ತಡವಾಗಿ ಕಬ್ಜಾ ಕೇಳಿ ದಾಖಲಿಸುವ ಕಾರಣ ಈಗ ಉಂಟಾಗಿರುತ್ತದೆ " ಎಂದು ಹೇಳಿ ಬರೆದಿರುತ್ತೇನೆ ಎಂದರೆ ಸರಿ. ಯಾವ ವರ್ಷದಲ್ಲಿ ಹಣಕಾಸಿನ ತೊಂದರೆಯಾಗಿದ್ದು ಎಂದು ನಾನು ನಿಖರವಾಗಿ ಬರೆದಿರುವುದಿಲ್ಲ ಎಂದರೆ ಸರಿ. 8 ವರ್ಷ ನನಗೆ ಸತತವಾಗಿ ಹಣಕಾಸಿನ ತೊಂದರೆ ಇತ್ತು ಎಂದು ನಾನು ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಬರೆದಿರುವುದಿಲ್ಲ ಎಂದರೆ ಸರಿ.

13. ಇದೇ ಜಮೀನಿಗೆ ಸಂಬಂದ ಪಟ್ಟಂತೆ ಸರ್ವೆ ನಂಬರ 46/1+2 ಜಮೀನಿನಲ್ಲಿ ಶಿವನಗೌಡ ಹೆಬ್ಬಾಳ ಅವರಿಗೆ 2 ಎಕರೆ ಜಮೀನಿನಲ್ಲಿ ಹಕ್ಕು ಇರುತ್ತದೆ . ಶಿವನಗೌಡ ಹೆಬ್ಬಾಳ ಅವರು ತಮಗೆ ಸಂಬಂದಪಟ್ಟ ಹೊಲದಲ್ಲಿ ವ್ಯವಸಾಯ ಮಾಡಿಕೊಂಡು ಬಂದಿರುತ್ತಾರೆ ಎಂದರೆ ಸರಿ. ಶಿವನಗೌಡ ಹೆಬ್ಬಾಳ ಅವರು ಇದೇ ನ್ಯಾಯಾಲಯದಲ್ಲಿ ನನ್ನ ಚಿತಾವಣೆಯಿಂದ ಒಂದು ಒ ಎಸ್ ನಂಬರ 117/2014 ದಾಖಲು

ಮಾಡಿರುತ್ತಾರೆ ಎಂದರೆ ಸರಿಯಲ್ಲ. ಶಿವನಗೌಡ ಹೆಬ್ಬಾಳ ಅವರು ಕೂಡ ಅವರ ಜಮೀನಿನ ಅರ್ಧ ಭಾಗದಲ್ಲಿ ಪ್ರತಿವಾದಿಯವರು ಒತ್ತುವರಿ ಮಾಡಿರುತ್ತಾರೆ ಎಂದು ಹೇಳಿ ನನ್ನ ಚೇತಾವಣಿಯಿಂದ ಸದರಿ ದಾವೆಯನ್ನು ಹಾಕಿರುತ್ತಾರೆ ಎಂದರೆ ಸಾಕ್ಷಿಯು ಒತ್ತುವರಿ ಮಾಡಿರುತ್ತಾರೋ ಇಲ್ಲವೋ ನನಗೆ ಗೊತ್ತಿಲ್ಲ ನಾನು ಚೇತಾವಣಿ ಮಾಡಿಲ್ಲ ಎಂದು ನುಡಿಯುತ್ತಾರೆ. ಶಿವಾನಂದ ಅವರು ದಿ. 26-08-2016 ರಲ್ಲಿ ನಿರ್ಬಂದಾಜ್ಞೆಯ ಅರ್ಜಿಯನ್ನು ಸಲ್ಲಿಸಿದ್ದು ಅದು ವಜಾ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನಾನು ಕೊಟ್ಟ ಪಿಟಿ ಶೀಟನ್ನು ತೆಗೆದುಕೊಂಡು ನಾನು ಮತ್ತು ಶಿವಾನಂದ ಹೆಬ್ಬಾರ ಅವರು ಪ್ರತಿವಾದಿಯ ವಿರುದ್ಧ ಸುಳ್ಳು ದಾವೆಯನ್ನು ಹಾಕಿ ತೊಂದರೆ ಕೊಡುತ್ತಿದ್ದೇವೆ ಎಂದರೆ ಸರಿಯಲ್ಲ. ನಾನು ಸರ್ವೆಯರ ಜೊತೆ ಸೇರಿ ಕೊಟ್ಟ ಪಿಟಿ ಶೀಟನ್ನು ಪ್ರತಿವಾದಿಗೆ ಯಾವುದೇ ನೋಟಿಸ ಕೊಡದೇ ತಯಾರು ಮಾಡಿರುತ್ತೇನೆ ಎಂದರೆ ಸರಿಯಲ್ಲ. ಪಿಟಿ ಶೀಟ ಮಾಡುವ ಪೂರ್ವದಲ್ಲಿ ಸರ್ವೆಯರ ಅವರು ಅಕ್ಕಪಕ್ಕದವರಿಗೆ ನೋಟಿಸ ಕೊಟ್ಟಿದ್ದ ಬಗ್ಗೆ ವರದಿಯನ್ನು ಮತ್ತು ಪ್ರತಿವಾದಿಯವರು ಪಿಟಿ ಶೀಟಗೆ ಸಹಿಯನ್ನು ಮಾಡಿರುವುದಿಲ್ಲ ಎಂದರೆ ಸಾಕ್ಷಿಯು ಹೌದು ಪ್ರತಿವಾದಿಯವರ ಸಹಿ ಪಿಟಿ ಶೀಟ ಮೇಲೆ ಇರುವುದಿಲ್ಲ ಆದರೆ ಅವರು ಅಲ್ಲಿ ಇದ್ದರು ಎಂದು ನುಡಿಯುತ್ತಾರೆ.ಎಲ್ಲರೂ ಗೈರು ಹಾಜರು ಇದ್ದಾಗ ನಾನು ಸರ್ವೆಯರ ಜೊತೆಗೆ ಹೋಗಿ ಪಿಟಿ ಶೀಟನ್ನು ತಯಾರು ಮಾಡಿಸಿರುತ್ತೇನೆ ಎಂದರೆ ಸರಿಯಲ್ಲ. ಪಿಟಿ ಶೀಟ ಮಾಡುವಾಗ ಅವರು ಹಾಜರು ಇದ್ದರೂ ಎಂದು ತೋರಿಸಲು ದಾಖಲೆ ಹಾಜರು ಮಾಡಲು ನನಗೆ ತೊಂದರೆ ಇರಲಿಲ್ಲ ಎಂದರೆ ಸರಿ.

14. ನನ್ನ ಜಮೀನು ಸರಕಾರಿ ಕೆರೆ ಮತ್ತು ಕಾಲುವೆಗೆ ಅತೀಕ್ರಮಣ ಆಗಿದ್ದು ಆದ್ದರಿಂದ ಪ್ರತಿವಾದಿಯವರ ಜಮೀನು ಎತ್ತಿ ಹಾಕಬೇಕು ಎನ್ನುವ ಉದ್ದೇಶದಿಂದ ಈ ದಾವೆಯನ್ನು ಮಾಡಿರುತ್ತೇನೆ ಎಂದರೆ ಸರಿಯಲ್ಲ.ಪ್ರತಿವಾದಿಯವರ ಜಮೀನು ಚೌಕ ಇರುವುದರಿಂದ ಮತ್ತು ನನ್ನ ಜಮೀನು ಕಾಲುವೆ ಮತ್ತು ಕೆರೆಗೆ ಅತೀಕ್ರಮ ಆಗಿರುವುದರಿಂದ ಅವರಿಗೆ ತೊಂದರೆ ಕೊಡಲು ಈ ದಾವೆಯನ್ನು ಹಾಕಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಜಮೀನಿನಲ್ಲಿ ಪ್ರತಿವಾದಿಯವರು ಯಾವುದೇ ರೀತಿಯಿಂದ ಅತೀಕ್ರಮಣ ಮಾಡಿರುವುದಿಲ್ಲ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು

ಶಿವಾನಂದ ಹೆಬ್ಬಾರ ಅವರನ್ನು ಆರ್ಥಿಕವಾಗಿ ಸಹಾಯ ಮಾಡಿ ಸುಳ್ಳು ದಾವೆಯನ್ನು ಪ್ರತಿವಾದಿಯವರ ವಿರುದ್ಧ ಹಾಕಲು ಚೇತಾವಣಿ ಮಾಡಿರುತ್ತೇನೆ ಎಂದರೆ ಸಾಕ್ಷಿಯು ಅವರು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ . ಪ್ರತಿವಾದಿಯವರು ನನ್ನ ಹಾಗೂ ಶಿವಾನಂದ ಅವರ ಜಮೀನಿನಲ್ಲಿ ಅತೀಕ್ರಮಣ ಮಾಡಿರುವುದಿಲ್ಲ ಅವರು ತಮ್ಮ ಕ್ಷೇತ್ರದ ಜಮೀನಿನಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ. ನನ್ನ ಪ್ರಮಾಣ ಪತ್ರದಲ್ಲಿ ನಾನು ಬರೆದಿರುವ ಹಾಗೇ ಯಾವುದೇ ಹಣಕಾಸಿನ ತೊಂದರೆ ಇರದಿದ್ದರೂ 8 ವರ್ಷದ ನಂತರ ಪ್ರತಿವಾದಿಯವರ ವಿರುದ್ಧ ಸುಳ್ಳಾಗಿ ದಾವೆ ದಾಖಲು ಮಾಡಿರುತ್ತೇನೆ ಎಂದರೆ ಸರಿಯಲ್ಲ. 2008 ರಿಂದ 2016 ರವರೆಗೆ ರೆವೆನ್ಯೂ ನ್ಯಾಯಾಲಯದಲ್ಲಿ ಯಾವುದೇ ಕೆಸ ಚಾಲ್ತಿ ಇರಲಿಲ್ಲ ಎಂದರೆ ಸರಿಯಲ್ಲ. ನಾನು ಸದರಿ ನ್ಯಾಯಾಲಯಗಳಲ್ಲಿ ಕೇಸಗಳು ಚಾಲ್ತಿಯಲ್ಲಿ ಇತ್ತು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ತಹಶಿಲ್ದಾರ ಅವರು ನನಗೆ ಎನೂ ಬರೆದು ಕೊಟ್ಟಿರುವುದಿಲ್ಲ. ತಹಶಿಲ್ದಾರ ಅವರು ನನಗೆ ಲಿಖಿತವಾಗಿ ಉತ್ತರ ಕೊಟ್ಟಿರುವುದಿಲ್ಲ. ನಾನು ಪ್ರತಿವಾದಿಯವರ ವಿರುದ್ಧ ಪೋಲಿಸ ಠಾಣೆಯಲ್ಲಿ ದೂರನ್ನು ಕೊಟ್ಟಿರುವುದಿಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು.)

ಓ ಹೆ ಕೆ ಸರಿ ಅದೆ.

ಸಿವಿಲ್ ನ್ಯಾಯಾಧೀಶರು, ಶಿಗ್ಗಾಂವ.